**ಸಂಪಾದಕೀಯ**

# ಇರುವಿಕೆ ಮತ್ತು ತೋರುವಿಕೆ

ಪ್ರಪಂಚದಲ್ಲಿ ಹೊಸ ಪ್ರವೃತ್ತಿಯೊಂದು ವ್ಯಾಪಕಗೊಳ್ಳುತ್ತಿದೆ. 'ನೀನು ಹೇಗೇ ಇರು, ಎಂತಾದರೂ ಇರು; ಸಮರ್ಪಕವಾಗಿ ತೋರಿಸಿಕೋ' ಎಂಬುದೇ ಆ ಪ್ರವೃತ್ತಿ. ಇದಕ್ಕೆ ದೇಶ, ಸಮಾಜ, ಸಂಸ್ಕೃತಿಗಳ ಸೀಮೆಯಿಲ್ಲ. ಜಪಾನಿನಿಂದ ಬಂದವನೊಬ್ಬ ಭಾರತದ ಜನಜೀವನವನ್ನು ಕಂಡು ಅಚ್ಚರಿಪಟ್ಟರೂ, ಇಲ್ಲಿನವರ ಮುಂದೆ ತನ್ನತನವನ್ನು 'ತೋರಿಸಿ'ಕೊಳ್ಳಲು ಯತ್ನಿಸುತ್ತಾನೆ. ಅಧ್ಯಾಪಕನು ತರಗತಿಯಲ್ಲಿ ಪಾಠ ಮಾಡಲು ನಿಂತಾಗ ತನ್ನ ಅರಿವು, ಸಾಮರ್ಥ್ಯ, ಆದರ್ಶಗಳನ್ನು ವಿದ್ಯಾರ್ಥಿಗಳ ಮುಂದೆ ಸಮರ್ಪಕವಾಗಿ ಪ್ರಕಟಗೊಳಿಸಲು ಪ್ರಯತ್ನ ಮಾಡುತ್ತಾನೆ. ಗ್ರಾಹಕ ಬಂದಾಗ ಅಂಗಡಿಯವನು ತನ್ನ ಬಳಿ ಇರುವುದೆಲ್ಲವೂ ಅತ್ಯುತ್ತಮ ವಸ್ತುಗಳೆಂದು ಮನವರಿಕೆ ಮಾಡಿಕೊಡಲು ಹರಸಾಹಸ ಮಾಡುತ್ತಾನೆ. ಇನ್ನು ಕಲಾವಿದರು, ವೈದ್ಯರು, ವಕೀಲರು, ಕಾರ್ಪೋರೇಟ್ ಜಗತ್ತಿನ ಮಂದಿ – ಇವರೆಲ್ಲ ತಮ್ಮ ತಮ್ಮ ಪ್ರತಿಷ್ಠೆಯನ್ನು ಸಮರ್ಥವಾಗಿ ಬಿಂಬಿಸಲು ಶಕ್ತಿಮೀರಿ ಯತ್ನಿಸುತ್ತಾರೆ. ಕೇವಲ ಮಾರ್ಕೆಟಿಂಗ್ ಮಾತ್ರವೇ ಅವರ ಉದ್ದೇಶವಾಗಿರಬೇಕಿಲ್ಲ; ಇದೇ ನಿಜವಾದ ಜೀವನಕ್ರಮವೆನಿಸಿದೆ.

### ಅಭಿವ್ಯಕ್ತಿ ಮತ್ತು ಅಭಿನಯ

ತನ್ನೊಳಗಿರುವ ಶಕ್ತಿ, ಸಾಮರ್ಥ್ಯ, ಪ್ರತಿಭೆಯನ್ನು ಪ್ರಕಟಗೊಳಿಸುವುದೇ 'ಅಭಿವ್ಯಕ್ತಿ'. ತನ್ನಲ್ಲಿಲ್ಲದ್ದನ್ನು ಇರುವಂತೆ ತೋರಿಸುವುದೇ 'ಅಭಿನಯ'. ಇವೆರಡೂ ಸಂಪೂರ್ಣ ಭಿನ್ನವಾದ ಕಾರ್ಯಗಳು. ಮೊದಲನೆಯದು, ಪ್ರತಿಯೊಬ್ಬರೂ ಬೆಳೆಸಿಕೊಳ್ಳಬೇಕಾದ ಗುಣ. ಎರಡನೆಯದು ಕಲೆಗೆ ಸಂಬಂಧಿಸಿದಂತೆ ಮಾತ್ರ 'ಗುಣ'ವೆನಿಸುವುದು, ವಾಸ್ತವ ಜಗತ್ತಿನಲ್ಲಿ ಅದು ಅವಗುಣವೆನಿಸುವುದು. ವ್ಯಂಗ್ಯವೆಂದರೆ, ಇವೆರಡರ ನಡುವಿನ ವ್ಯತ್ಯಾಸವನ್ನರಿಯದೆ, ಅಭಿವ್ಯಕ್ತಿಯ ಬದಲು ಅಭಿನಯವೇ ನಿಜವಾಗಿ ಯಶಸ್ಸಿಗೆ ಬೇಕಾಗಿರುವ ಗುಣವೆಂದು ಹಲವರು ನಂಬುತ್ತಾರೆ; ಅದನ್ನೇ ಜೀವನದುದ್ದಕ್ಕೂ ಪ್ರಯೋಗಿಸುತ್ತಾರೆ. ನಿಜಜೀವನದಲ್ಲೂ ಅಭಿನಯ ಮಾಡುವವರನ್ನು ಸಾಮಾನ್ಯವಾಗಿ ಯಾರೂ ನಂಬುವುದಿಲ್ಲ; 'ವ್ಯವಹಾರ ಚತುರರು' ಎನ್ನುತ್ತಾರೆ. ಆದರೆ ಸರಿಯಾಗಿ ಅಭಿವ್ಯಕ್ತಿ ಮಾಡದವರನ್ನು 'ನಿನ್ನನ್ನು ನೀನು ಸರಿಯಾಗಿ ಅಭಿವ್ಯಕ್ತಿಗೊಳಿಸುವುದನ್ನು ಕಲಿ' ಎನ್ನುತ್ತಾರೆ; ಅದು ಬದುಕಿನಲ್ಲಿ ಅಗತ್ಯವೆಂದೇ ಪರಿಗಣಿಸಲಾಗುತ್ತಿದೆ.

ನಾಟಕ, ಸಿನಿಮಾ ನೃತ್ಯ ಮೊದಲಾದ ಕಲೆಗಳಲ್ಲಿ ವಾಸ್ತವತೆಯ ಅನುಕರಣೆಯಿದೆ; ಅಭಿನಯದ ಮೂಲಕ ಅದು ಮರುಸೃಷ್ಟಿಗೊಳ್ಳುತ್ತದೆ. ಅದು ವಾಸ್ತವಕ್ಕೆ ಎಷ್ಟು ಹತ್ತಿರ ಎಂಬುದು ಒಂದು ದೃಷ್ಟಿಕೋನ; ಹೀಗೆ ಅಭಿನಯಿಸಲ್ಪಟ್ಟಾಗ ಹೊಸ ಅರ್ಥ, ಹೊಸ ಬೆಳಕು ಏನೇನು ಸೃಷ್ಟಿಗೊಂಡಿತು, ಯಾವ ಬಗೆಯಲ್ಲಿ ಅದು ಪ್ರೇಕ್ಷಕರಿಗೆ ಆನಂದ ನೀಡಿತು – ಇದು ಇನ್ನೊಂದು ದೃಷ್ಟಿಕೋನ. ಈ ಎರಡು ಮಾನದಂಡಗಳ ಮೂಲಕ ಕಲೆಯನ್ನು ಅಳೆದು, ಅದು ಜೀವನವನ್ನು ಹೇಗೆ ಕಂಡಿತು ಎಂಬುದು ಮುಖ್ಯವಾಗುತ್ತದೆ. ಕಲೆಯ ವಿಮರ್ಶೆ, ಚಿಂತನೆ, ಮೀಮಾಂಸೆ ನಡೆಸುವವರು ಕೊಡುವ ಅಂತಿಮ ತೀರ್ಮಾನವಿಷ್ಟೆ: ಅದು ಎಷ್ಟು ರಸಾಸ್ವಾದ ನೀಡಿತು? ಅದು ಜೀವನವನ್ನು ಎಷ್ಟು ಸಮೃದ್ಧಗೊಳಿಸಿತು? ಕಲೆಯ ಪರಿಧಿಯಲ್ಲಿ ಮಾತ್ರವೇ ಸಮಾಜ ಅಭಿನಯವನ್ನು ಒಪ್ಪಿಕೊಳ್ಳುವುದು; ಅದರಾಚೆಗಲ್ಲ.

ಇನ್ನು ನಿಜಜೀವನಕ್ಕೆ ಬಂದಾಗ, ವಾಸ್ತವತೆಯ ಮುಂದೆ ಅಭಿನಯದ ತೆರೆ ಕಳಚಿ ಬೀಳುತ್ತದೆ. ಹೊರನೋಟಕ್ಕೆ ಕಂಡದ್ದೆಲ್ಲವೂ ನಿಜವಲ್ಲ ಎಂಬುದು ಹೆಚ್ಚು ತಡವಿಲ್ಲದೆ ಎಲ್ಲರಿಗೂ ಅರ್ಥವಾಗುತ್ತದೆ. ನಗರಜೀವನದಲ್ಲಿ ಕಣ್ಣಿಗೆ ರಾಚುವ ಬೆಡಗು ಬಿನ್ನಾಣಗಳು, ಜಾಹೀರಾತು ಹಾಗೂ ಮಾಧ್ಯಮಗಳು ಕಟ್ಟಿಕೊಡುವ ಬಣ್ಣಬಣ್ಣದ ಬದುಕು ನಿಜವಲ್ಲ ಎಂಬುದು ಪ್ರತಿ ಗಳಿಗೆಯಲ್ಲೂ ದೃಢಗೊಳ್ಳುತ್ತದೆ. ಆದರೂ ಆಧುನಿಕ ಜೀವನದಲ್ಲಿ ಈ ಬೆಡಗಿನ ನಾಗಾಲೋಟವೇಕೆ?

### ಮಾಯಾ ಪ್ರಪಂಚ

ಸಾಂಖ್ಯದರ್ಶನದಲ್ಲಿ ಒಂದು ಸುಂದರವಾದ ಚಿತ್ರವಿದೆ: ಪುರುಷನು ತನ್ನ ನೈಜಸ್ವರೂಪವನ್ನು ಅರಿತು, ಪ್ರಕೃತಿಗಿಂತ ತಾನು ಬೇರೆ ಎಂದರಿತಾಗ ಪ್ರಕೃತಿ ಅವನನ್ನು ಬಿಟ್ಟು ಓಡುವುದು – 'ತನ್ನ ನಿಜರೂಪ ತೋರಿಸಿದ ನರ್ತಕಿಯಂತೆ' *(ಸಾಂಖ್ಯಕಾರಿಕಾ, ೫೯).* ಆದರೆ ಹೀಗಾಗುವುದು ಪುರುಷನಲ್ಲಿ ಪೂರ್ಣಜ್ಞಾನವುಂಟಾದಾಗ ಮಾತ್ರ. ಆದರೆ ಆಧುನಿಕ ಜಗತ್ತಿನಲ್ಲಿ ನರ್ತಕಿ ತನ್ನ ನಿಜರೂಪ ತೋರಿಸಿಕೊಂಡ ನಂತರವೂ ನರ್ತಿಸುತ್ತಲೇ ಇದ್ದಾಳೆ; ಪುರುಷನನ್ನು ಮರುಳುಗೊಳಿಸುತ್ತಲೇ ಇದ್ದಾಳೆ. ಬೆಡಗಿನ ಪ್ರಪಂಚ ಎಷ್ಟೇ ಮಿಥ್ಯೆಯೆಂದರಿತರೂ, ಆಧುನಿಕ ಜಗತ್ತು ಪ್ರತಿಕ್ಷಣವೂ ಹೊಸ ಹೊಸ ಚಮತ್ಕಾರಗಳನ್ನು ಮಾಡುತ್ತಲೇ ಇದೆ; ಬಣ್ಣ ಬಣ್ಣದ ಕನಸುಗಳನ್ನು ಕಟ್ಟಿಕೊಡುತ್ತಲೇ ಇದೆ. ಹೀಗೆ ಅಭಿನಯದ, ತೋರಿಕೆಯ ಜಗತ್ತಿಗೆ ಕೊನೆಯಿಲ್ಲದಾಗಿದೆ. ಟಿ.ವಿ, ಕಂಪ್ಯೂಟರ್, ಮೊಬೈಲ್, ಸಿನಿಮಾಗಳ ಜಗತ್ತೇ ನಿಜವೆನಿಸುತ್ತದೆ; ವಾಸ್ತವ ಪ್ರಪಂಚವೇ ಬೇಡವಾಗುತ್ತದೆ.

**'ಇಂದ್ರಿಯೇಭ್ಯಃ ಪರಾ ಹ್ಯರ್ಥಾಃ'** ಎನ್ನುತ್ತದೆ ಕಠೋಪನಿಷತ್ತು. ಇಂದ್ರಿಯಗಳಿಗಿಂತ ಅವುಗಳನ್ನು ಸೆಳೆದು ಮರುಳುಗೊಳಿಸುವ ವಿಷಯ ವಸ್ತುಗಳು ಹೆಚ್ಚು ಶಕ್ತಿಶಾಲಿ ಎಂದು ಅದರರ್ಥ. ಸಾಮಾನ್ಯವಾಗಿ ಸ್ಥೂಲವಸ್ತುಗಳಿಗಿಂತ ಸೂಕ್ಷ್ಮವಸ್ತುಗಳೇ ಶಕ್ತಿಶಾಲಿಯೆನ್ನುವುದು ನಿಯಮ. ಉದಾಹರಣೆಗೆ, ಕಂಪ್ಯೂಟರ್ ಭಾಷೆಯಲ್ಲಿ ಹೇಳುವಾಗ, ಸ್ಥೂಲಯಂತ್ರ (hardware) ಮತ್ತು ಸೂಕ್ಷ್ಮಯಂತ್ರ (software) ಗಳಿವೆ. ಇವುಗಳಲ್ಲಿ ಸೂಕ್ಷ್ಮಯಂತ್ರವೇ ಹೆಚ್ಚು ಶಕ್ತಿಶಾಲಿ. ಅಂತೆಯೇ, ದೇಹಕ್ಕಿಂತ ಇಂದ್ರಿಯಗಳು ಸೂಕ್ಷ್ಮ ಹಾಗೂ ಶಕ್ತಿಶಾಲಿ. ಇಂದ್ರಿಯಗಳಿಗಿಂತ ಮನಸ್ಸು ಸೂಕ್ಷ್ಮ ಹಾಗೂ ಶಕ್ತಿಶಾಲಿ. ಮನಸ್ಸಿಗಿಂತ ಬುದ್ಧಿ, ಬುದ್ಧಿಗಿಂತ ಆತ್ಮ ಸೂಕ್ಷ್ಮ ಹಾಗೂ ಶಕ್ತಿಶಾಲಿ. ಇದು ಸಾಮಾನ್ಯ ನಿಯಮ. ಆದರೆ ಕಠೋಪನಿಷತ್ತಿನಲ್ಲಿ ಹೇಳಿರುವ

‘ಇಂದ್ರಿಯಗಳಿಗಿಂತ ವಿಷಯವಸ್ತು ಶಕ್ತಿಶಾಲಿ’ ಎಂಬ ಮಾತು, ಈ ಸಾಮಾನ್ಯ ನಿಯಮಕ್ಕೆ ಹೊಂದಿಕೆಯಾಗುವುದಿಲ್ಲ. ಆದರೆ ಈಗಿನ ಪ್ರಪಂಚವನ್ನು ಗಮನಿಸಿದಾಗ, ಉಪನಿಷತ್ತಿನ ಈ ಮಾತು ಸತ್ಯವೆನಿಸುತ್ತದೆ. ನಮ್ಮ ಪಂಚೇಂದ್ರಿಯಗಳನ್ನು ಮರುಳು ಮಾಡುವ ದ್ರವ್ಯಗಳ ರಾಶಿ ರಾಶಿ ಪ್ರದರ್ಶನ ನಡೆಯುತ್ತಿದೆ; ನಮ್ಮ ಎಲ್ಲ ಇಂದ್ರಿಯಗಳೂ ಅವುಗಳತ್ತ ಆಕರ್ಷಿಸಲ್ಪಟ್ಟು, ಅತ್ತ ಧಾವಿಸುತ್ತವೆ. ಮನಸ್ಸು, ಬುದ್ಧಿ, ಆತ್ಮ ಎಲ್ಲವೂ ಇಂದ್ರಿಯಗಳನ್ನು ಅನುಸರಿಸಿ, ವೈಭವದ ಪ್ರಪಂಚದಲ್ಲಿ ಉನ್ಮತ್ತವಾಗಿ ಮೈಮರೆಯುತ್ತವೆ. ಇದಲ್ಲವೇ ಮಾಯೆ?

## ಕಾಣದೆ ಹೋಗುವ ಸತ್ಯ

ಕೆಲವೊಂದು ಸನ್ನಿವೇಶಗಳಲ್ಲಿ ಎರಡು ಪಂಗಡಗಳ ನಡುವೆ ನಡೆಯುವ ತರ್ಕ, ಯುಕ್ತಿ, ವಾದಗಳು ಎಷ್ಟೊಂದು ಗೊಂದಲವನ್ನು ಸೃಷ್ಟಿಸುತ್ತವೆ ಎಂದರೆ, ಸತ್ಯ ಯಾವುದು ಎಂಬುದೇ ತಿಳಿಯದೆ ಹೋಗುತ್ತದೆ; ಸತ್ಯವನ್ನು ಅರಿಯುವ ಎಲ್ಲ ಪ್ರಯತ್ನಗಳೂ ವಿಫಲವಾಗುತ್ತವೆ. ಹಲವು ರಾಜಕೀಯ ಬಿಕ್ಕಟ್ಟುಗಳು, ನ್ಯಾಯಾಲಯದ ವ್ಯಾಜ್ಯಗಳು, ಬೌದ್ಧಿಕ ನಿಲುವುಗಳ ನಡುವಿನ ತಾರ್ಕಿಕ ವಾಗ್ವಾದಗಳು ಅನೇಕ ಬಾರಿ ದಿಕ್ಕು ತಪ್ಪಿಸುತ್ತವೆ. ವಿರುದ್ಧ ಪಂಗಡಗಳ ಎರಡೂ ವಾದಗಳು ಪ್ರಬಲವಾಗಿವೆ ಎನಿಸುತ್ತದೆ. ಅವುಗಳ ಹಗ್ಗ-ಜಗ್ಗಾಟದಲ್ಲಿ ಸತ್ಯ ಬಸವಳಿದು ಮರೆಯಾಗಿಬಿಡುತ್ತದೆ. ಆಶ್ಚರ್ಯವೆಂದರೆ, ಎಲ್ಲರೂ ಸತ್ಯವನ್ನು ಕುರಿತೇ ಮಾತನಾಡುತ್ತಾರೆ; ತಾವು ಸತ್ಯವನ್ನು ಪ್ರತಿಪಾದಿಸುತ್ತಿದ್ದೇವೆ ಎಂದೇ ಹೇಳುತ್ತಾರೆ. ಆದರೆ ಯಾರ ನಿಲುವು ಕೂಡಾ ಸತ್ಯವಾಗಿರುವುದಿಲ್ಲ - ಇದೇ ವ್ಯಂಗ್ಯ. ಪ್ರಪಂಚದ ಇತಿಹಾಸದಲ್ಲಿ ತೀವ್ರ ಬಿಕ್ಕಟ್ಟಿಗೆ ಕಾರಣವಾಗಿರುವ ಘಟನೆಗಳೆಷ್ಟೋ, ಸತ್ಯವು ಶಾಶ್ವತವಾಗಿ ಮುಚ್ಚಿಹೋಗಿರುವ ಪ್ರಸಂಗಗಳೆಷ್ಟೋ! ಒಟ್ಟಿನಲ್ಲಿ, ಸತ್ಯವೆಂಬುದು ಒಂದು ಇದ್ದೇ ಇದ್ದರೂ, ಅದರ ಸ್ವರೂಪ ಮರೆಯಾಗಿ, ವಿವಿಧ ಹಿತಾಸಕ್ತಿಗಳ ‘ಸತ್ಯವೆಂದು ತೋರಿಸುವಿಕೆ’ಯೇ ಎದ್ದು ನಿಂತ ಘಟನೆಗಳಲ್ಲೆಲ್ಲ ಮಾನವನ ನೈತಿಕ ಅಧಃಪತನವಾಗಿದೆ; ಅವನ ಶ್ರೇಷ್ಠ ಮೌಲ್ಯಗಳಿಗೆ ಅಪಚಾರವಾಗಿದೆ. ಇಂದಿನ ಬೆಡಗಿನ ಜಗತ್ತು ತೋರಿಸಿಕೊಡುತ್ತಿರುವ ಸುಳ್ಳಿನ ಪ್ರಪಂಚದಲ್ಲಿ ನಮ್ಮ ಯುವಜನತೆ ಮರಳಾಗುತ್ತದೆ; ಅದರೊಂದಿಗೇ ನಮ್ಮ ನೈತಿಕ ಮೌಲ್ಯ ಕೂಡ ಮರೆಯಾಗುತ್ತಿದೆ. ‘ಎಲ್ಲವೂ ಮಾಯೆ ಎಂದಾದರೆ, ಮಾಯೆಯಲ್ಲಿ ಮುಳುಗಿ ತೇಲಬಾರದೇಕೆ?’ ಎಂಬ ಮನೋಭಾವವಿದು. ದೇಶದಲ್ಲೆಲ್ಲ ಲಂಚ, ಭ್ರಷ್ಟಾಚಾರ ತಾಂಡವವಾಡುತ್ತಿರುವಾಗ, ನಾವೂ ಅದರಲ್ಲಿ ಮುಳುಗಿ ತೇಲಾಡಿದರೆ ಏನು ತೊಂದರೆ ಎಂದೇ ಅವರು ಪ್ರಶ್ನಿಸುತ್ತಾರೆ.

ಭವಿಷ್ಯ ಭಾರತವನ್ನು ಕಂಡುಕೊಳ್ಳಬೇಕಾದವರು ಈ ಅಪಾಯವನ್ನು ಮನಗಾಣಬೇಕು.

## ವಾಸ್ತವತೆ ಮತ್ತು ಜೀವನ

ಇಷ್ಟಾದರೂ ಮಾನವನ ಜೀವನದಲ್ಲಿ ಎಲ್ಲ ಮೌಲ್ಯಗಳೂ ಸತ್ಯವನ್ನೇ ಆಧರಿಸಿ ನಿಂತಿವೆ ಎಂಬುದನ್ನು ಅಲ್ಲಗಳೆಯುವಂತಿಲ್ಲ. ‘ತೋಳ ಬಂತು ತೋಳ’ ಎಂಬ ಪ್ರಸಿದ್ಧ ನೀತಿಕತೆಯನ್ನೇ ತೆಗೆದುಕೊಳ್ಳೋಣ:

ಒಂದೂರಿನಲ್ಲಿ ಒಬ್ಬ ಮೂರ್ಖ ಹುಡುಗನಿದ್ದನಂತೆ. ಅವನು ತಮಾಷೆಗಾಗಿ ಎಲ್ಲರೂ ಕೇಳುವಂತೆ, ‘‘ತೋಳ ಬಂತು ತೋಳ.. ದಯವಿಟ್ಟು ಕಾಪಾಡಿ’’ ಎಂದು ಕೂಗಿಕೊಂಡು, ಅವರನ್ನೆಲ್ಲ ಗಾಬರಿಗೊಳಿಸುತ್ತಿದ್ದ. ಜನ ಅವನ ಬಳಿಗೆ ಬಂದು, ‘‘ಎಲ್ಲಿ ತೋಳ, ತೋರಿಸು’’ ಎಂದು ಬಡಿಗೆ, ಬೆತ್ತ ಇವುಗಳೊಂದಿಗೆ ತೋಳವನ್ನು ಹೊಡೆದು ಕೊಲ್ಲಲು ಮುಂದಾದರೆ, ಆತ ಗೊಳ್ಳನೆ ನಕ್ಕುಬಿಡುತ್ತಿದ್ದ. ‘‘ಸುಳ್ಳು ಹೇಳಿದೆ.. ನೀವೆಲ್ಲರೂ ಮೂರ್ಖರಾದಿರಿ!’’ ಎಂದು ಹಂಗಿಸುತ್ತಿದ್ದ. ಜನ ಅವನನ್ನು ಬಯ್ಯುತ್ತ ಅಲ್ಲಿಂದ ಹೊರಟು ಹೋಗುತ್ತಿದ್ದರು. ಹೀಗೆ ಹಲವು ಬಾರಿ ಜನರನ್ನು ಮೋಸಮಾಡಿದ ಆ ಮೂರ್ಖ ಹುಡುಗ. ಕೊನೆಗೊಂದು ದಿನ ನಿಜವಾಗಿಯೂ ಅಲ್ಲಿಗೆ ತೋಳ ಬಂದೇಬಿಟ್ಟಿತು. ಈ ಬಾರಿ ಭಯಭೀತನಾದ ಹುಡುಗ ಎಷ್ಟು ಜೋರಾಗಿ ಕೂಗಿಕೊಂಡರೂ ಜನ ಬರಲಿಲ್ಲ. ಅವರು ಮಾತನಾಡಿಕೊಂಡರು, ‘‘ಓ! ಅದೇ ಮೂರ್ಖ ಹುಡುಗ.. ಸುಳ್ಳು ಹೇಳಿ ನಮ್ಮನ್ನು ಮೋಸಗೊಳಿಸುತ್ತಾನೆ’’ ಎಂದು ಸುಮ್ಮನಿದ್ದುಬಿಟ್ಟರು. ತೋಳ ಹುಡುಗನ್ನು ತಿಂದು ಮುಗಿಸಿಬಿಟ್ಟಿತು.

ಜನ ಅನುಭವದಿಂದ ಕಲಿಯುತ್ತಾರೆ. ಜೀವನದಲ್ಲಿ ಏಟು ತಿಂದು ಕಲಿತವರು ಅದನ್ನು ಮರೆಯುವುದಿಲ್ಲ. ಒಬ್ಬ ವ್ಯಕ್ತಿ ಒಳ್ಳೆಯವನೆನಿಸಿಕೊಳ್ಳಬೇಕಾದರೆ ಅವನೆಷ್ಟು ಪ್ರಾಮಾಣಿಕ ಎಂಬುದು ಮುಖ್ಯವಾಗುತ್ತದೆ. ಅವನನ್ನು ನಂಬಬಹುದೇ ಎಂದೇ ಪ್ರತಿಯೊಬ್ಬರೂ ಪ್ರಶ್ನಿಸಿಕೊಳ್ಳುತ್ತಾರೆ. ವ್ಯಾವಹಾರಿಕ ಜಗತ್ತಿನಲ್ಲಿ ಪ್ರತಿಯೊಬ್ಬರೂ ಇತರರನ್ನು ಅಳೆಯುವುದು ಇದೇ ಮಾನದಂಡದಿಂದ : ಅವನು ನಂಬಿಕೆಗೆ ಅರ್ಹನೆ, ಅವನೊಂದಿಗೆ ವ್ಯವಹಾರ ಮಾಡಿದರೆ ನನಗೆ ಲಾಭವಾದೀತೇ - ಎಂದು. ವಿಶ್ವಾಸ, ಶ್ರದ್ಧೆ, ನಂಬಿಕೆ ಇವೆಲ್ಲವೂ ಸತ್ಯವನ್ನು ಆಧರಿಸಿರುವುದರಿಂದ, ಅದು ಎಲ್ಲ ಕಾಲಕ್ಕೂ ಸಲ್ಲುವ ಮೂಲಭೂತ ಮೌಲ್ಯವೆನ್ನಬೇಕು. ಅಪ್ರಾಮಾಣಿಕತೆಯನ್ನೇ ಅವಲಂಬಿಸಿರುವ ವ್ಯಾಪಾರೀಕರಣ, ರಾಜಕಾರಣ, ಸಿದ್ಧಾಂತಗಳು ಕೇವಲ ಅಲ್ಪಕಾಲಿಕವಾಗಿ ವಿಜೃಂಭಿಸುತ್ತವೆ; ಅವು ಜೀವನದ ಮೂಲಭೂತ ಅಂಗವಾಗಲಾರವು. ಅವು ತಾತ್ಕಾಲಿಕ ಲಾಭದಾಯಕ ಉದ್ಯಮವೆನಿಸಿದರೂ, ಸ್ವಲ್ಪ ಸಮಯದಲ್ಲೇ ನೆಲಕಚ್ಚುವುವು. ಈ ದೂರದೃಷ್ಟಿಯನ್ನು ಒಳಗೊಂಡಿದ್ದರೆ ಮಾತ್ರ ನಮ್ಮ ಜೀವನ ಸಮೃದ್ಧವಾಗುವುದು.

## ಸ್ವಭಾವ ಮತ್ತು ಮನೋಭಾವಗಳಲ್ಲಿ

ವೈಯಕ್ತಿಕ ನೆಲೆಯಲ್ಲಿ ವಾಸ್ತವತೆ, ಸತ್ಯ - ಇದರ ಪಾತ್ರವೇನೆಂಬುದನ್ನು ಗಮನಿಸೋಣ. ಸಾಮಾನ್ಯವಾಗಿ ಮನೆಯೇ ಮೊದಲ ಪಾಠಶಾಲೆ ಎನ್ನುತ್ತಾರೆ. ತಾಯಿತಂದೆಯರ ಗುಣ ಮಕ್ಕಳಿಗೆ ಬರುತ್ತದೆ; ಹೆತ್ತವರು ಕಲಿಸಿದಂತೆ ಮಕ್ಕಳು ಬೆಳೆಯುತ್ತಾರೆ. ಮುಂದೆ ಶಾಲೆ, ವಿದ್ಯಾಭ್ಯಾಸ, ಸ್ನೇಹಿತರು ಇವುಗಳ ಪ್ರಭಾವದಿಂದ ವ್ಯಕ್ತಿಯೊಬ್ಬನ ಸ್ವಭಾವ ನಿರ್ಮಾಣಗೊಳ್ಳುತ್ತದೆ. ಆದರೆ ಈ ಎಲ್ಲ ಬಾಹ್ಯ ಅಂಶಗಳನ್ನು ಹೀರಿ ಬೆಳೆಯುವ ವ್ಯಕ್ತಿಗೆ ತನ್ನಲ್ಲಿ ಅಂತರ್ಗತವಾಗಿರುವ ಸ್ವಭಾವವೊಂದಿರುತ್ತದಲ್ಲವೆ? ಈ ಆಂತರಿಕ ಸ್ವಭಾವವೂ ಅವನ ವ್ಯಕ್ತಿತ್ವವನ್ನು ರೂಪಿಸುತ್ತದೆ. ಆದ್ದರಿಂದ ಮೌಲ್ಯ, ಆದರ್ಶಗಳನ್ನು ಬೆಳೆಸುವುದಲ್ಲಿ, ಸಾಮಾಜಿಕ ಪರಿಸರವು ಉತ್ತಮ ಮೌಲ್ಯಗಳಾದ ಸತ್ಯಸಂಧತೆ, ಪ್ರಾಮಾಣಿಕತೆ, ಶ್ರಮ ಜೀವನ, ಉತ್ತಮ ಗುಣನಡತೆ ಇವನ್ನು ಪ್ರೇರೇಪಿಸುವಂತಿರಬೇಕು. ಸುಳ್ಳು, ವಂಚನೆ, ಭ್ರಷ್ಟಾಚಾರ, ಕ್ರೌರ್ಯ, ರಾಗ-ದ್ವೇಷಗಳನ್ನು ಹಬ್ಬಿಸುವ ಹಲವು ಬಗೆಯ ಪ್ರಚಾರ ಮಾಧ್ಯಮಗಳನ್ನು ಸರಕಾರವೇ ನಿಷೇಧಿಸಬೇಕು. ಎಲ್ಲ ಬದಲಾವಣೆಗಳೂ ಜನರ ಪ್ರತಿಭಟನೆಯಿಂದಲೇ

ಸಾಧ್ಯವಾಗಬೇಕು ಎಂಬುದು ಪ್ರಜಾಪ್ರಭುತ್ವದ ವೈಫಲ್ಯವಾದೀತು. ಪ್ರಜೆಗಳ ಪ್ರತಿನಿಧಿಗಳಿಗೂ ಅರಿವು, ಜವಾಬ್ದಾರಿ ಇರಬೇಕು.

ವೈವಿಧ್ಯತೆ ಪ್ರಪಂಚದ ಮೂಲಭೂತ ನಿಯಮವಾಗಿರುವುದರಿಂದ ವ್ಯಕ್ತಿಗಳ ಸ್ವಭಾವದಲ್ಲಿ ಭಿನ್ನತೆಯದ್ದೇ ಇರುತ್ತದೆ. ಆದರೆ ಸಮಾಜದ ಒಟ್ಟು ಪ್ರವೃತ್ತಿ ಎಷ್ಟರಮಟ್ಟಿಗೆ ವಾಸ್ತವತೆಯನ್ನು ಪುರಸ್ಕರಿಸಿ ಪೋಷಿಸುತ್ತದೆ ಎಂಬುದು ಮುಖ್ಯವಾಗುತ್ತದೆ. ಈ ದೃಷ್ಟಿಯಿಂದ ನೋಡುವಾಗ, ಭಾರತೀಯ ಸಮಾಜವಿನ್ನೂ ತನ್ನ ಸಂಸ್ಕೃತಿ, ಪರಂಪರೆಯ ಮೌಲ್ಯಗಳನ್ನು ದೃಢವಾಗಿ ಅವಲಂಬಿಸಿದೆ; ಆದ್ದರಿಂದ, ಅದರ ಅಂತಃಸತ್ವವು ಇನ್ನೂ ವಾಸ್ತವತೆಯಿಂದ ವಿಮುಖವಾಗಿಲ್ಲವೆನ್ನಬೇಕು. ಪಾಶ್ಚಾತ್ಯ ಜಗತ್ತಿನ ಆಧುನಿಕತೆಯ ಪ್ರಭಾವ ಹೆಚ್ಚಿರುವ ನಗರಗಳಲ್ಲಿ ಮಾತ್ರ ಸಾಂಸ್ಕೃತಿಕ ಮೌಲ್ಯಗಳು ಸಡಿಲವಾಗುತ್ತಿವೆ. ಅಷ್ಟೇ ವೇಗವಾಗಿ ಅವು ಗ್ರಾಮೀಣ ಪರಿಸರವನ್ನೂ ಕಬಳಿಸುತ್ತಿವೆ ಎನ್ನುವುದೂ ನಿಜ. ಈ ಮಾರ್ಪಾಡು ಈಚೆಗೆ ಸುದ್ದಿಮಾಧ್ಯಮ, ಎಲೆಕ್ಟ್ರಾನಿಕ್ ಮಾಧ್ಯಮಗಳಿಂದ ತೀವ್ರಗತಿಯಲ್ಲಿ ನಡೆಯುತ್ತಿದೆ ಎಂಬುದೊಂದೇ ನಮ್ಮ ಮುಂದಿರುವ ಅಪಾಯ. ಈ ಬಗೆಯ ಸದ್ದಿಲ್ಲದ ಬದಲಾವಣೆಯನ್ನು ತಡೆಯಲು ಅಷ್ಟೇ ಪ್ರಬಲವಾದ ಅಸ್ತ್ರಗಳು ನಮ್ಮಲ್ಲಿಲ್ಲವೆ? ಇವೇ ಸುದ್ದಿ ಮಾಧ್ಯಮಗಳು, ಎಲೆಕ್ಟ್ರಾನಿಕ್ ಮಾಧ್ಯಮಗಳು ಈ ದಿಕ್ಕಿನಲ್ಲಿ ಕೆಲಸ ಮಾಡಲಾರವೆ?

ಇಲ್ಲಿ ಮತ್ತೆ ವಿವಿಧ ಹಿತಾಸಕ್ತಿಗಳ, ಸೆಳೆತಗಳ ಶಕ್ತಿ ಕೆಲಸ ಮಾಡುತ್ತದೆ. ಸಾಮಾಜಿಕ, ರಾಜಕೀಯ ಹಾಗೂ ವೈಚಾರಿಕ ಸೆಳೆತಗಳಿಂದ ಕೂಡಿದ ಸಂಕೀರ್ಣವಾದ ಪರಿಸ್ಥಿತಿಯಲ್ಲಿ ಇಂದು ನಮ್ಮ ದೇಶವಿರುವುದರಿಂದ, ಪ್ರಜ್ಞಾಪೂರ್ವಕವಾಗಿ ನಮ್ಮ ಮಾಧ್ಯಮಗಳನ್ನು ಬಳಸಿಕೊಂಡು, ಸಮರ್ಥವಾಗಿ ಆಧುನಿಕತೆಯ ಪ್ರಭಾವವನ್ನು ಎದುರಿಸುವುದೊಂದೇ ಎಲ್ಲ ಸಮಸ್ಯೆಗಳನ್ನು ನಿವಾರಿಸಬಹುದಾದ ಮಾರ್ಗವಾಗಿದೆ.

### ಸತ್ಯ: ಮೂಲಭೂತ ಆವಶ್ಯಕತೆ

ಹಲವು ಸೂಕ್ಷ್ಮ ಸಂಗತಿಗಳು ಜೀವನದಲ್ಲಿ ಕಣ್ಣಿಗೆ ಕಾಣಿಸದೆ ಇರಬಹುದು. ಆದರೆ ಅವು ಅದೆಷ್ಟು ಅನಿವಾರ್ಯವೆಂದು ತಿಳಿದು ಬರುವುದು, ಅವುಗಳು ಇಲ್ಲವಾದಾಗಲೇ. ಉದಾಹರಣೆಗೆ, ಗಾಳಿ, ನೀರು. ಗಾಳಿಯಿಲ್ಲದೆ ಒಂದು ಕ್ಷಣವೂ ಬದುಕಿರಲಾರೆವು. ನೀರಿಲ್ಲದೆ ಒಂದು ದಿನವೂ ಜೀವಿಸಲಾರೆವು. ಆದರೆ ಈ ಅನಿವಾರ್ಯತೆ ನಮ್ಮ ಅರಿವಿಗೆ ಬರುವುದೇ ಇಲ್ಲ, ಪ್ರತಿದಿನವೂ ಸಹಜವಾಗಿ ಕಳೆದುಹೋಗುತ್ತದೆ. ಪ್ರತಿಕ್ಷಣ ನಾವು ಉಸಿರಾಡುತ್ತೇವೆ, ಬಾಯಾರಿದಾಗಲೆಲ್ಲ ನೀರು ಕುಡಿಯುತ್ತೇವೆ. ನೀರು ಸಿಗದ ಸನ್ನಿವೇಶದಲ್ಲಿ ಸಿಲುಕಿಕೊಂಡಾಗ, ಮರುಭೂಮಿಯಲ್ಲಿ ಒಂದು ಹನಿ ನೀರಿಲ್ಲದೆ ಒದ್ದಾಡುವಾಗ ಮಾತ್ರ ನಾವು ಬೆವರು ಸುರಿಸುತ್ತ, ಒಣಗಿದ ಗಂಟಲಲ್ಲಿ ಉಗುಳು ನುಂಗುತ್ತ, ''ಅಯ್ಯೋ, ಒಂದು ಗುಟುಕು ನೀರೂ ಸಿಗದಾಯಿತಲ್ಲ! ಒಂದೇ ಒಂದು ಬೊಗಸೆ ನೀರು ಸಿಕ್ಕಿದರೆ!..'' ಎಂದು ಗೋಗರೆಯುತ್ತೇವೆ. ಇನ್ನು, ಉಸಿರು ಕಟ್ಟಿದಾಗ ಒಂದಿನಿತು ಗಾಳಿ ಸಿಗಲಿ ಎಂದು ಒದ್ದಾಡುವ ಜೀವ, ಗಾಳಿ ಸಿಕ್ಕಿದ ಕೂಡಲೇ ದೀರ್ಘ ಉಸಿರೆಳೆದು, ''ಅಬ್ಬಾ! ಹಾಯೆನಿಸಿತು! ಒಂದು ಕ್ಷಣ ಸತ್ತೇ ಹೋಗುತ್ತಿದ್ದೆ'' ಎನ್ನುತ್ತದೆ!

ಮಾನವನ ಆಂತರಿಕ, ಬಾಹ್ಯ ಎರಡೂ ಪ್ರಪಂಚಗಳಲ್ಲಿ ಸತ್ಯವೆಂಬುದು ನೀರು, ಗಾಳಿ ಇದ್ದಂತೆ. ಪ್ರತಿಕ್ಷಣವೂ ನಮ್ಮ ಇರುವಿಕೆಯು ಯಾವುದು ವಾಸ್ತವವೋ ಅದರತ್ತ ನೋಡುವುದು. ಯಾವುದು ಅಸತ್ಯವೋ, ಯಾವುದು ನಿಜವೆಂಬಂತೆ ಭ್ರಮೆಯನ್ನು ಹುಟ್ಟಿಸಿ ನಮ್ಮನ್ನು ಮೋಸಗೊಳಿಸುವುದೋ ಅದನ್ನು ನಮ್ಮ ಅಂತರಂಗ, ಬಹಿರಂಗವೆರಡೂ ತ್ಯಜಿಸಬಯಸುವುದು. ಇದಕ್ಕೆ ಕಾರಣ, ನಮ್ಮ ಅಸ್ತಿತ್ವದ ಪ್ರತಿಯೊಂದೂ ಸತ್ಯವನ್ನೇ ಅವಲಂಬಿಸಿರುವುದು. 'ಸತ್ಯ'ವೆಂದರೇ ಅಸ್ತಿತ್ವ ; ಆದ್ದರಿಂದ ಅದು ಎಲ್ಲ ಇರುವಿಕೆಗೆ ಆಧಾರ. ಇಂಥ 'ಸತ್ಯ' ವೆಂಬುದು ಭೌತಿಕಪ್ರಪಂಚ, ಮಾನಸಿಕ ಪ್ರಪಂಚ ಹಾಗೂ ಆಧ್ಯಾತ್ಮಿಕ ಪ್ರಪಂಚಗಳಿಗೆ ಆಧಾರ; ಅದಕ್ಕೆ ನಿಷ್ಠರಾಗಿರುವುದರಿಂದ ಮಾತ್ರ ನಾವು ಸತ್ಯದಲ್ಲಿ ಜೀವಿಸಬಹುದು. ಅದರಿಂದಲೇ ಎಲ್ಲ ಮೌಲ್ಯ, ನೈತಿಕತೆ, ಧರ್ಮ, ಆಧ್ಯಾತ್ಮಿಕತೆಗಳು ಸಫಲವಾಗುವುವು. ಶ್ರೀರಾಮಕೃಷ್ಣರು, ''ಕಲಿಯುಗದಲ್ಲಿ ಸತ್ಯವಚನವೇ ತಪಸ್ಸು'' ಎಂದಿರುವುದು ಈ ಹಿನ್ನೆಲೆಯಲ್ಲಿ ಹೆಚ್ಚು ಅರ್ಥಪೂರ್ಣವಾಗಿದೆ.

### ಅಭಿವ್ಯಕ್ತಿ ಸ್ವಾತಂತ್ರ್ಯ

ಇತ್ತೀಚೆಗೆ ಸಾಮಾಜಿಕ ವಲಯಗಳಲ್ಲಿ ಹಾಗೂ ಸುದ್ದಿ ಮಾಧ್ಯಮಗಳಲ್ಲಿ ಹೆಚ್ಚು ಚರ್ಚೆಗೆ ಒಳಗಾಗುತ್ತಿರುವ ವಿಷಯವೆಂದರೆ ಅಭಿವ್ಯಕ್ತಿ ಸ್ವಾತಂತ್ರ್ಯ. ಸಭೆ, ಸಮಾರಂಭಗಳಲ್ಲಿ, ಪತ್ರಿಕೆ-ರೇಡಿಯೋ-ದೂರದರ್ಶನಗಳಲ್ಲಿ , ವಾಟ್ಸಪ್, ಫೇಸ್‌ಬುಕ್, ಟ್ವಿಟರ್‌ಗಳಲ್ಲಿ ಹಲವು ವಿಷಯಗಳನ್ನು ಕುರಿತು ಯಾರು ಬೇಕಾದರೂ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಬಹುದು; ಏನನ್ನು ಬೇಕಾದರೂ ಹೇಳಬಹುದು. ಪ್ರತಿಯೊಬ್ಬರಿಗೂ ಅವಕಾಶವೆಂಬ ಅರ್ಥದಲ್ಲಿ ಇದು ಆಧುನಿಕ ಜಗತ್ತಿನ ಅತ್ಯದ್ಭುತ ಆವಿಷ್ಕಾರ; ಇದರಲ್ಲಿ ಎರಡು ಮಾತಿಲ್ಲ. ಆದರೆ ಇದರಿಂದ ಉಂಟಾಗುವ ಅನಾಹುತಗಳೂ ಕಡಿಮೆಯೇನಿಲ್ಲ. ನೂರು ಜನ ಬೊಬ್ಬಿಟ್ಟರೆ ಸತ್ಯ ಸುಳ್ಳಾಗದು; ಸುಳ್ಳನ್ನು ಸತ್ಯವನ್ನಾಗಿ ಮಾಡಲಾಗದು. ದುರಂತವೆಂದರೆ, ಇಂದು ಇಂಥ ಕೆಲಸಗಳೇ ನಡೆಯುತ್ತಿವೆ. ಅಭಿವ್ಯಕ್ತಿ ಸ್ವಾತಂತ್ರ್ಯದ ನೆಪದಲ್ಲಿ ಮಾರಕವಾದ, ಸತ್ಯದೂರವಾದ ವಿಚಾರಗಳನ್ನು ಹರಡಲಾಗುತ್ತಿದೆ. ಹಿಂಸೆ, ಕ್ರೌರ್ಯಗಳನ್ನು ಪ್ರಚೋದಿಸುವ ಕಾರ್ಯಗಳಿಗೂ ಪರವಾನಗಿ ನೀಡಬೇಕೆಂಬ ವಾದವನ್ನು ಹಲವರು ಒಡ್ಡುತ್ತಿದ್ದಾರೆ. ಹಲವೆಡೆ ರಾಷ್ಟ್ರಕ್ಕೆ, ಮಹಾತ್ಮರಿಗೆ, ಧರ್ಮಕ್ಕೆ ಅವಹೇಳನ ಮಾಡುವ ಕಾರ್ಯ ನಡೆಯುತ್ತಿದೆ. ಆದರೆ ಅಭಿವ್ಯಕ್ತಿ ಸ್ವಾತಂತ್ರ್ಯಕ್ಕೂ ಒಂದು ಮಿತಿಯಿದೆ. ಇತರರ ನಿಂದನೆ, ಅಸತ್ಯದ ಪ್ರಚಾರಕ್ಕೆ, ಹಿಂಸಾಚಾರದ ಪ್ರೇರಣೆಗೆ ಅದು ಒಂದು ಕಾರಣವಾಗಬಾರದು. ಆದರೆ ಇದಕ್ಕೆ ಸರಿ-ತಪ್ಪುಗಳ ಮಾನದಂಡವನ್ನು ನೀಡುವವರು ಯಾರು? ಯಾವ ಬಗೆಯ ಮಾನದಂಡವನ್ನು ನೀಡಬೇಕು? ಒಟ್ಟು ಸಮಾಜವನ್ನು ಮುನ್ನಡೆಸುವ, ಎಲ್ಲದಕ್ಕೂ ಜವಾಬ್ದಾರಿ ಹೊತ್ತಿರುವ ರಾಷ್ಟ್ರದ ಆಡಳಿತವೇ ಇದನ್ನು ನಿರ್ಧರಿಸಬೇಕು.

ಲೌಕಿಕ ಜೀವನದ ಸುಖಸಮೃದ್ಧಿಯಿಂದ ಕಲೆ, ಸಂಸ್ಕೃತಿ, ಧರ್ಮ ಹಾಗೂ ಆಧ್ಯಾತ್ಮಿಕತೆ ಉನ್ನತ ಸ್ಥಿತಿಗೆ ಹೋಗುತ್ತದೆ. ಎಲ್ಲಿ ಕಲೆ, ಸಂಸ್ಕೃತಿ, ಧರ್ಮ, ಆಧ್ಯಾತ್ಮಿಕತೆಗಳು ಉನ್ನತ ಸ್ಥಿತಿಯಲ್ಲಿ ಇರುತ್ತವೋ, ಅಲ್ಲಿ ಲೌಕಿಕ ಜೀವನದಲ್ಲೂ ಶಾಂತಿ, ಸುಖ, ನೆಮ್ಮದಿಗಳು ಹರಿದಾಡುತ್ತವೆ. ಪರಸ್ಪರ ಪೂರಕವಾದ ಈ ಬಾಹ್ಯ-ಆಂತರಿಕ ಬದುಕನ್ನು ಒಂದುಗೂಡಿಸುವ ಮೌಲ್ಯಗಳೇ ಸತ್ಯ ಹಾಗೂ ಸೌಂದರ್ಯ. ಇವೆರಡನ್ನೂ ಅರಿತುಕೊಂಡು, ಜನಜೀವನವನ್ನು ಮುನ್ನಡೆಸುವ ಕಾರ್ಯ ನಮ್ಮದಾಗಬೇಕು.